
# ‘ಕಥಾ ಕೀರ್ತನ’ ವನ್ನು ಕುರಿತ ಸಂಶೋಧನ ಗ್ರಂಥ

ಭಾರತದ ಎಲ್ಲೆಡೆ ಪ್ರಚಲಿತವಿರುವ ‘ಹರಿಕಥೆ’ ಅಥವಾ ‘ಕಥಾಕೀರ್ತನ’ವನ್ನು ಕುರಿತು ಡಾ.ದತ್ತಾತ್ರೇಯ ಎಲ್. ವೇಲಣಕರ್ ಅವರು ಜೈನ ವಿಶ್ವವಿದ್ಯಾಲಯಕ್ಕೆ ಸಮರ್ಪಿಸಿದ ಮಹಾಪ್ರಬಂಧದ ಪುಸ್ತಕರೂಪವು ಇತ್ತೀಚೆಗೆ ಪ್ರಕಟಗೊಂಡಿದೆ. **‘ಕಥಾಕೀರ್ತನದ ಮೇಲೆ ಭಾರತೀಯ ಶಾಸ್ತ್ರೀಯ ಸಂಗೀತದ ಪ್ರಭಾವ — ಒಂದು ಅಧ್ಯಯನ’** ಎಂಬ ಶೀರ್ಷಿಕೆಯೊಂದಿಗೆ ಈ ಕೃತಿ ಪ್ರಕಟಗೊಂಡಿದ್ದು, ಬೆಂಗಳೂರಿನ ಷಡ್ಜಕಲಾ ಕೇಂದ್ರ ಟ್ರಸ್ಟ್ ಇದನ್ನು ಪ್ರಕಟಿಸಿದೆ. ಲೇಖಕರು ಸ್ವತಃ ತಾವೇ ಉತ್ತಮ ಶಾಸ್ತ್ರೀಯ ಸಂಗೀತ ಕಲಾವಿದರು ಹಾಗೂ ಸಾಂಪ್ರದಾಯಿಕ ಕಥಾ ಕೀರ್ತನ ಪರಂಪರೆಯ ಹಿನ್ನೆಲೆಯುಳ್ಳವರು. ಈ ವಿಷಯವನ್ನು ಕುರಿತು ಸಂಶೋಧನೆ ನಡೆಸಲು ಇದಕ್ಕಿಂತ ಉತ್ತಮ ಅಧಿಕಾರಿ ಇನ್ನಾರು? ಸಂಶೋಧನೆಯ ಸ್ವರೂಪವನ್ನು ಹೊಂದಿರುವ ಈ ಗ್ರಂಥವು ನಮ್ಮ ಪರಂಪರೆಯ ಕಥಾ ಕೀರ್ತನದ ಸುದೀರ್ಘ ಇತಿಹಾಸ, ಶಾಸ್ತ್ರೀಯ ಕಲೆಗಳ ಹಾಗೂ ಕಥಾಕೀರ್ತನೆಯ ಸಂಬಂಧ, ಈ ಪ್ರಕಾರದ ಲಕ್ಷಣ ಹಾಗೂ ವಿಶೇಷತೆ ಇವುಗಳನ್ನು ವಿವರಿಸುತ್ತದೆ. ಇದರೊಂದಿಗೆ ಶಾಸ್ತ್ರೀಯ ಸಂಗೀತದ ಪ್ರಭಾವ ಕಥಾ ಕೀರ್ತನೆಯ ಮೇಲೆ ಆಗಿರುವ ಬಗೆ ಹೇಗೆ ಎಂಬುದನ್ನು ಹತ್ತಾರು ದಾಖಲೆಗಳೊಂದಿಗೆ ವಿಶ್ಲೇಷಿಸುತ್ತದೆ.

ಏಳು ಅಧ್ಯಾಯಗಳಲ್ಲಿ ೧) ಈ ವಿಷಯವನ್ನು ಕುರಿತ ಪರಿಚಯ, ಸಂಶೋಧನೆಯ ಉದ್ದೇಶ ಮತ್ತು ವ್ಯಾಪ್ತಿ, ೨) ಕಥಾಕೀರ್ತನದ ಉಗಮ ಮತ್ತು ಭಾರತದ ವಿವಿಧ ರಾಜ್ಯಗಳಲ್ಲಿ ಈ ಕಲೆಯ ಬೆಳವಣಿಗೆ, ೩) ಕಥಾಕೀರ್ತನದಲ್ಲಿ ವಿವಿಧ ಕಲೆಗಳು ೪) ಭಾರತೀಯ ಶಾಸ್ತ್ರೀಯ ಸಂಗೀತ ೫) ಕಥಾಕೀರ್ತನದ ಮೇಲೆ ಕರ್ನಾಟಕ ಶಾಸ್ತ್ರೀಯ ಸಂಗೀತದ ಪ್ರಭವ ೬) ಕಥಾಕೀರ್ತನದ ಮೇಲೆ ಹಿಂದೂಸ್ತಾನೀ ಸಂಗೀತದ ಪ್ರಭಾವ ೭) ವಿಶ್ಲೇಷಣೆ ಮತ್ತು ಉಪಸಂಹಾರ — ಇವಿಷ್ಟು ವಿಷಯಗಳನ್ನು ಒಳಗೊಂಡಂತೆ ಮಹಾಪ್ರಬಂಧವು ರಚಿತವಾಗಿದೆ.




**ಕೃತಿ:** ಕಥಾ ಕೀರ್ತನದ ಮೇಲೆ ಭಾರತೀಯ ಶಾಸ್ತ್ರೀಯ ಸಂಗೀತದ ಪ್ರಭಾವ – ಒಂದು ಅಧ್ಯಯನ
**ಲೇಖಕರು :** ಡಾ. ದತ್ತಾತ್ರೇಯ ಎಲ್. ವೇಲಣಕರ್
**ಪ್ರಕಾಶನ :** ಷಡ್ಜಕಲಾ ಕೇಂದ್ರ ಟ್ರಸ್ಟ್(ರಿ) ಬೆಂಗಳೂರು – 560 032
**ಫೋ:** 9845320512
**ಪುಟ:** 8+204 **ಬೆಲೆ :** 100

ಕರ್ನಾಟಕ ಹಾಗೂ ಹಿಂದೂಸ್ತಾನೀ ಶಾಸ್ತ್ರೀಯ ಸಂಗೀತ ಪದ್ಧತಿಗಳೆರಡರ ಹಿನ್ನೆಲೆ ಹಾಗೂ ಕಥಾಕೀರ್ತನದ ಮೇಲೆ ಅವುಗಳ ಪ್ರಭಾವ – ಇದು ಅಧ್ಯಯನಕ್ಕೆ ಸಾಕಷ್ಟು ವಿಸ್ತಾರವಾದ ಕ್ಷೇತ್ರವಾಗಿದ್ದು, ಐತಿಹಾಸಿಕ ಹಾಗೂ ಶಾಸ್ತ್ರೀಯ ಹಿನ್ನೆಲೆಯಲ್ಲಿ ಇದನ್ನು ಕುರಿತು ಮಾಹಿತಿ ಸಂಗ್ರಹ ಮಾಡಿ ವಿಶ್ಲೇಷಿಸುವುದೇ ಒಂದು ದೊಡ್ಡ ಸಾಹಸದ ಕಾರ್ಯ. ಪ್ರಧಾನ ಅಂಶಗಳನ್ನು ಬಿಡದೆ, ಸಮಗ್ರ ಅಧ್ಯಯನ ನಡೆಸುವುದು ಒಂದು ಜೀವಿತಾವಧಿಯ ಕಾರ್ಯವೆನ್ನಬೇಕು. ಈ ಎಲ್ಲ ವಿಸ್ತಾರ, ವೈಶಾಲ್ಯಗಳ ಅರಿವಿದ್ದೂ ಈ ವಿಷಯವನ್ನು ಆರಿಸಿ ಸಂಶೋಧನೆ ಮಾಡಿರುವುದು ಲೇಖಕರ ಆಸಕ್ತಿ ಹಾಗೂ ಅವಿರತ ಪರಿಶ್ರಮದ ದ್ಯೋತಕವಾಗಿದೆ ಎನ್ನಬೇಕು. ಈ ಕೃತಿಯ ಕೆಲವೇ ಪುಟಗಳನ್ನು ಓದುತ್ತ ಹೋದಂತೆ, ಇದು ಎಷ್ಟೊಂದು ವ್ಯಾಪಕವಾದ ಮಾಹಿತಿಗಳನ್ನು ಒಳಗೊಂಡಿದೆ ಹಾಗೂ ಎಂತಹ ಮಹತ್ವದ ವಿಚಾರಗಳನ್ನು ತಿಳಿಸಿಕೊಡುತ್ತದೆ ಎಂದು ಅರ್ಥವಾಗುತ್ತದೆ. ಕೃತಿಯುದ್ದಕ್ಕೂ ಲೇಖಕರ ಅಧ್ಯಯನದ ಶಿಸ್ತು, ಬರವಣಿಗೆಯ ಅಚ್ಚುಕಟ್ಟುತನ ಹಾಗೂ ಅಪಾರ ಶಾಸ್ತ್ರಪ್ರಾವೀಣ್ಯ ಎದ್ದುಕಾಣುತ್ತದೆ. ಲೇಖಕರ ಬರವಣಿಗೆಯ ಶೈಲಿ ಅತ್ಯಂತ ಸರಳವೂ ಸುಂದರವೂ ಆಗಿದೆ. ಸಂಗೀತ, ಹರಿಕಥೆಗಳನ್ನು ಅಭ್ಯಾಸ ಮಾಡುವವರಿಗೂ ಈ ಕ್ಷೇತ್ರಗಳ ಬಗ್ಗೆ ವಿಶೇಷವಾಗಿ ತಿಳಿಯಬಯಸುವವರಿಗೂ ಈ ಕೃತಿಯು ಒಂದು ಪರಾಮರ್ಶನ ಗ್ರಂಥವಾಗಿ ಉಪಯುಕ್ತವಾಗಬಲ್ಲುದು.

ವಿಶ್ವವಿದ್ಯಾಲಯಗಳಿಗೆ ಸಮರ್ಪಿಸಲ್ಪಟ್ಟ ಅನೇಕ ಪಿಹೆಚ್.ಡಿ. ಪ್ರಬಂಧಗಳು ಕೇವಲ ಅಲ್ಲಿನ ಅಧ್ಯಯನ ವಿಭಾಗಗಳಲ್ಲೇ ಅಗೋಚರವಾಗಿ ಉಳಿದು, ಕಾಲಕ್ರಮೇಣ ಸದ್ದಿಲ್ಲದೆ ಮರೆಯಾಗುತ್ತವೆ. ಈ ಅಪೂರ್ವ ಸಂಶೋಧನ ಕೃತಿ ಹಾಗಾಗಲಿಲ್ಲ; ಓದುಗರಿಗೆ ಲಭ್ಯವಾಗುವಂತೆ ಮಾಡಿ ಲೇಖಕರು ಮಹದುಪಕಾರ ಮಾಡಿದ್ದಾರೆ. ಆಸಕ್ತರಿಗೆ, ಅಧ್ಯಯನಶೀಲರಿಗೆ ಮಾತ್ರವಲ್ಲ, ಕಥಾಕೀರ್ತನದ ಸಹೃದಯರಿಗೆ ಅತ್ಯಂತ ಉಪಯುಕ್ತವಾದ ಈ ಗ್ರಂಥವಿದು. ಈ ಪುಸ್ತಕವನ್ನು ಕೊಂಡುಕೊಂಡು ತಮ್ಮ ಬಳಿ ಇಟ್ಟುಕೊಳ್ಳುವುದರಿಂದ ಅವರಿಗೆ ಹೆಚ್ಚಿನ ಲಾಭವುಂಟಾಗುತ್ತದೆ ಎಂದು ಸಂದೇಹವಿಲ್ಲದೆ ಹೇಳಬಹುದು.